## ನಿಮಗಿದು ತಿಳಿದಿರಲಿ

### ಸತಿ ಆಚರಣೆ ತಡೆಗಟ್ಟುವಿಕೆ

- ಗಂಡ ಸತ್ತಾಗ ಆತನ ಹೆಂಡತಿ ಅವನೊಂದಿಗೆ ಸಜೀವ ಬೆಂಕಿಗೆ ಆಹುತಿಯಾಗುವುದು, ಹೂಳಲ್ಪಡುವುದು
- 1829ರ ಬ್ರಿಟಿಷ್ ಆಳ್ವಿಕೆಯಲ್ಲಿ ಸತಿ ಆಚರಣೆ ಕಾನೂನು ಬಾಹಿರವಾಯಿತು
- 1987ರಲ್ಲಿ ರೂಪ್ ಕನ್ವರ್ ಎಂಬ 18 ವರ್ಷದ ಮಹಿಳೆ ಸಜೀವ ಬೆಂಕಿಗೆ ಆಹುತಿಯಾಗಿ ಸತಿ ಆಚರಿಸಲಾಯಿತು. ದೇಶಾದ್ಯಂತ ಅದರ ಚರ್ಚೆಯಾಗಿ ಹೊಸ ಕಾನೂನು ರಚನೆಯಾಯಿತು 1988ರಲ್ಲಿ ಸತಿ ತಡೆಗಟ್ಟುವ ಕಾಯಿದೆ ಜಾರಿಗೆ ಬಂತು: ಸತಿಯ ಆಚರಣೆ, ಅನುಮೋದನೆ, ವೈಭವೀಕರಣ ಎಲ್ಲವೂ ಶಿಕ್ಷಾರ್ಹ

### ವರದಕ್ಷಿಣೆ ನಿಷೇಧಿಸುವ ಕಾಯಿದೆ, 1961

- ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ಎರಡೂ ಶಿಕ್ಷಾರ್ಹ ಅಪರಾಧ
- ವರದಕ್ಷಿಣೆಯ ಆಚರಣೆ ಮಹಿಳೆಯರ ಮೇಲೆ ಆಗುವ ಹಿಂಸಾಚಾರಗಳಿಗೆ ಎಡೆಮಾಡುತ್ತದೆ; ಭಾವನಾತ್ಮಕ, ಮಾನಸಿಕ ಹಿಂಸಾಚಾರಗಳಿಂದ ಹಿಡಿದು ಸಾವಿಗೂ ಕಾರಣವಾಗುತ್ತದೆ, ಕೊಲೆಯೂ ನಡೆಯುತ್ತದೆ
- ಐ.ಪಿ.ಸಿ. ಸೆ. 304ಬಿ: ಮದುವೆಯಾದ ಏಳು ವರ್ಷದ ಒಳಗೆ ಹೆಂಡತಿ ಸುಟ್ಟಗಾಯಗಳಿಂದ ಸಾವನ್ನಪ್ಪಿದರೆ, ಆಕೆಯ ಸಾವಿನ ಮೊದಲು ಗಂಡ ಅಥವಾ ಆತನ ಮನೆಯವರಿಂದ ಹಿಂಸೆ, ಕಿರುಕುಳಗಳಿಗೆ ಆಕೆ ಗುರಿಯಾಗಿದ್ದರೆ, ಆಕೆಯ ಸಾವನ್ನು ವರದಕ್ಷಿಣೆ ಸಾವು ಎಂದು ಪರಿಗಣಿಸಲಾಗುತ್ತದೆ
- 2013ರ ಸಮೀಕ್ಷೆಯ ಪ್ರಕಾರ ವರ್ಷದಲ್ಲಿ 8083 ವರದಕ್ಷಿಣೆ ಸಾವುಗಳಾಗಿವೆ

### ಬಾಲ್ಯವಿವಾಹ ತಡೆಗಟ್ಟುವ ಕಾಯಿದೆ, 1929

- ಹೆಣ್ಣುಮಗಳಿಗೆ 18 ವರ್ಷ ವಯಸ್ಸು, ಗಂಡು ಹುಡುಗನಿಗೆ 21 ವರ್ಷ ವಯಸ್ಸಾಗದೇ ಮದುವೆ ಮಾಡಿಸುವುದು ಶಿಕ್ಷಾರ್ಹ ಅಪರಾಧ
- 2001ರ ಜನಗಣತಿಯ ಪ್ರಕಾರ, 10 ವರ್ಷಕ್ಕಿಂತ ಕಿರಿಯ ಹೆಣ್ಣುಮಕ್ಕಳಲ್ಲಿ ಮದುವೆಯಾದವರು 0; 10ರಿಂದ 14 ವರ್ಷ ವಯಸ್ಸಿನ 5.92 ಕೋಟಿ ಹುಡುಗಿಯರಲ್ಲಿ ಮದುವೆಯಾದವರು 14 ಲಕ್ಷ; 15ರಿಂದ 19 ವರ್ಷ ವಯಸ್ಸಿನ 4.63 ಕೋಟಿ ಹುಡುಗಿಯರಲ್ಲಿ ಮದುವೆಯಾದ ಹುಡುಗಿಯರ ಸಂಖ್ಯೆ 1.13 ಕೋಟಿ

### ವಿಶೇಷ ಮದುವೆ ಕಾಯಿದೆ (ಸ್ಪೆಷಲ್ ಮ್ಯಾರೇಜ್ ಆಕ್ಟ್)

ವಯಸ್ಸಿಗೆ ಬಂದ (18 ವರ್ಷ ವಯಸ್ಸಿನ) ಯಾವುದೇ ಮಹಿಳೆ ತನ್ನ ಇಚ್ಛೆಯಂತೆ, ತಾನು ಆಯ್ಕೆ ಮಾಡಿಕೊಂಡವನನ್ನು ಮದುವೆಯಾಗಬಹುದು ಕೌಟುಂಬಿಕ ಹಿಂಸೆಗೆ ಒಳಗಾದ ಹಿಂದೂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಯಾವುದೇ ಮಹಿಳೆ (ಪುರುಷನೂ) ತಮ್ಮ ಮದುವೆ ವಿಚ್ಛೇದನ ಕಾಯಿದೆಗಳಡಿ ವಿಚ್ಛೇದನ ಪಡೆಯಬಹುದು ವಿಚ್ಛೇದನ ಪಡೆದಾಗ ತನ್ನನ್ನು ನೋಡಿಕೊಳ್ಳಲು ಆಗದ ಮಹಿಳೆ ಗಂಡನಿಂದ ಜೀವನಾಂಶ ಪಡೆಯಬಹುದು. ಇದು ಅವರ ಜೀವನಶೈಲಿ, ದುಡಿಯುವ ತಾಕತ್ತುಗಳನ್ನು ನೋಡಿಕೊಂಡು ಕೋರ್ಟು ಒಂದು ಮೊತ್ತವನ್ನು ನಿಗದಿಪಡಿಸುತ್ತದೆ. (ಜೀವನಾಂಶವೆಂದರೆ ಗಂಡನ ಆಸ್ತಿಯಲ್ಲಿ ಪಾಲು ಅಲ್ಲ. ಗಂಡನ ಸ್ವಯಾರ್ಜಿತ ಆಸ್ತಿಯಲ್ಲಿ ಹೆಂಡತಿಗೆ ಯಾವುದೇ ಪಾಲು ಇರುವುದಿಲ್ಲ)

### ಗರ್ಭಿಣಿ ಹಿತ ರಕ್ಷಣಾ ಕಾಯಿದೆ (ಮೆಟರ್ನಿಟಿ ಬೆನಿಫಿಟ್ ಆಕ್ಟ್)

- ಗರ್ಭಿಣಿ ಮಹಿಳೆಗೆ ತನ್ನ ಉದ್ಯೋಗದ ಸ್ಥಳದಲ್ಲಿ 26 ವಾರಗಳ ಕಾಲ ಸಂಬಳ ಕೊಟ್ಟು ಹೆರಿಗೆ ರಜೆ ಕೊಡಬೇಕು
- ಪ್ರತೀ ಉದ್ಯೋಗದ ಸ್ಥಳದಲ್ಲಿ ಹಸುಳೆಗಳನ್ನು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಜಾಗಗಳು (ಕ್ರೆಶ್) ಇರಬೇಕು



## ಯಾವುದು ದೌರ್ಜನ್ಯ?

ಗಂಡ, ಗಂಡನ ಮನೆಯವರು, ಕುಟುಂಬದವರು ಯಾರೇ ಆದರೂ ಶೀಲದ ಬಗ್ಗೆ ಅನುಮಾನದಿಂದ ಕಾಣುವುದು, ಮನೆಯಲ್ಲಿ ಕೂಡಿಹಾಕುವುದು, ಬಯ್ಯುವುದು, ಹೀಯಾಳಿಸುವುದು, ಹಣಕ್ಕಾಗಿ ಪೀಡಿಸುವುದು, ಗಂಡ ಯಾವಾಗಲೂ ಲೈಂಗಿಕವಾಗಿ ಕೂಡಬೇಕೆಂದು ಪೀಡಿಸುವುದು, ಮಕ್ಕಳನ್ನು ಕರಕೊಂಡು ಹೋಗುತ್ತೇನೆ ಎಂಬ ಬೆದರಿಕೆ ಹಾಕುವುದು, ಮಕ್ಕಳಿಗೆ ಹಿಂಸೆಕೊಡುವ ಭಯಹುಟ್ಟಿಸಿ ಬೇಕಾದ್ದು ಮಾಡಿಸಿಕೊಳ್ಳುವುದು – ಇವೆಲ್ಲವೂ ಕೌಟುಂಬಿಕ ದೌರ್ಜನ್ಯ ಕಾಯಿದೆ ಅಡಿಯಲ್ಲಿ 'ದೌರ್ಜನ್ಯ' ಎಂದು ಪರಿಗಣಿಸಲ್ಪಡುತ್ತದೆ.

ಹಾಗೇ ಕುಟುಂಬ ಎಂದರೆ ಗಂಡ, ಗಂಡನ ಮನೆಯವರೇ ಆಗಬೇಕಿಲ್ಲ. ಹಿಂಸೆ, ಕ್ರೌರ್ಯಗಳು 'ಕುಟುಂಬ' ಎಂದು ಕರೆಸಿಕೊಳ್ಳಬಹುದಾದ ಯಾವುದೇ ಸೂರಿನಡಿ ನಡೆಯಬಹುದು; ನಡೆಯುತ್ತದೆ. ಓದಲೆಂದೋ, ಕೆಲಸದ ಮೇಲೆಯೋ ಉಳಕೊಂಡ ದೂರದ ಸಂಬಂಧಿಕರ ಮನೆಯಲ್ಲಿ ಲೈಂಗಿಕ ಹಿಂಸೆ ನಡೆಯಬಹುದು, ಸ್ವಂತ ತಂದೆ, ತಾಯಿಯೋ, ಅಣ್ಣನೋ ಸಂಬಂಧಿಕನೋ ದುಡ್ಡಿಗಾಗಿ ದುಡಿಯುವಂತೆ ಹಿಂಸಿಸುತ್ತಿರಬಹುದು. ಗಂಡನೇ ಲೈಂಗಿಕವಾಗಿ ಪೀಡಿಸುತ್ತಿರಬಹುದು. ಸಂಗಾತಿಯಾದವನು ದೈಹಿಕವಾಗಿ ಹಿಂಸಿಸುತ್ತಿರಬಹುದು. ಗಂಡ, ಅವನ ಮನೆಯವರು ವರದಕ್ಷಿಣೆಗಾಗಿಯೋ, ಮಕ್ಕಳಾಗಿಲ್ಲವೆಂದೋ, ಗಂಡು ಮಗುವಾಗಿಲ್ಲವೆಂದೋ ಕಟು ಮಾತಿನಿಂದಲೋ, ದೈಹಿಕವಾಗಿಯೋ ಹಿಂಸಿಸುತ್ತಿರಬಹುದು. ಇಂಥಾ ದೂರುಗಳನ್ನೆಲ್ಲಾ ಪೊಲೀಸರ ಬಳಿಗೆ ಕೊಂಡೊಯ್ಯುವವರು ಯಾರು, ಅಲ್ಲಿ ದೂರು ಕೊಟ್ಟರೆ ಯಾವ್ಯಾವ ಹಿಂಸೆಗಳನ್ನೆಲ್ಲ ಅನುಭವಿಸಬೇಕೋ ಎಂದು ಅದೆಷ್ಟೋ ಹೆಣ್ಣುಮಕ್ಕಳು ದೂರನ್ನು ದಾಖಲಿಸುವುದಿಲ್ಲ.

ಈ ಸಂಕೀರ್ಣತೆಗಳನ್ನು ಗುರುತಿಸಿ ಕಾನೂನು ವ್ಯವಸ್ಥೆ 2005ರಲ್ಲಿ ಕೌಟುಂಬಿಕ ದೌರ್ಜನ್ಯವನ್ನು ನಿಯಂತ್ರಿಸುವ ಕಾಯಿದೆಯನ್ನು ಜಾರಿಮಾಡಿತು (ಡೊಮೆಸ್ಟಿಕ್ ವಯೊಲೆನ್ಸ್ ಪ್ರಿವೆನ್ಷನ್ ಆಕ್ಟ್, 2005). ಈ ಕಾನೂನು ಒಂದು ಸಿವಿಲ್ ಕಾಯಿದೆ. ಇಲ್ಲಿ ಪೊಲೀಸು, ಎಫ್‌ಐಆರ್, ಪೊಲೀಸರಿಂದ ಬಂಧನ, ಜೈಲು ಇಂಥ ಯಾವುದೇ ನಡಾವಳಿಗಳು ಇಲ್ಲದೇ, ಬೇರೆ ಪರಿಭಾಷೆಯಲ್ಲಿ ಕೌಟುಂಬಿಕ ದೌರ್ಜನ್ಯವನ್ನು ನಿಯಂತ್ರಿಸಲು ಸಾಧ್ಯವಾಗಬೇಕೆಂಬ ಉದ್ದೇಶದಿಂದ ಈ